ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ**: 04.04.2024.**

**ಪಾಟೀ ಸವಾಲು - 1** ರಿಂದ **5** ನೇ ಪ್ರತಿವಾದಿಗಳ ಪರ ವಕೀಲರಿಂದಃ

3) ನಾನು ಬಿ.ಸಿ.ಎಸ್. ಅಂದರೆ Bachelor of Company Secretary ಪದವೀಧರಳಿರುತ್ತೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ ಓದಲು ಬರೆಯಲು ಬರುತ್ತದೆ ಮತ್ತು ಚೆನ್ನಾಗಿ ಅರ್ಥವಾಗುತ್ತದೆ ಎಂದರೆ ಸರಿ. ನಾನು ಹಾಲಿ ಬೆಂಗಳೂರಿನ ಪ್ಲಾಟಿನಂ ಸಿಟಿ ಅಪಾರ್ಟಮೆಂಟ್ ಒಂದರಲ್ಲಿ ಬಾಡಿಗೆಗೆ ವಾಸ ಮಾಡುತ್ತಿದ್ದೇನೆ. ದಾವಾ ಸ್ವತ್ತು ಮಾರಾಟಕ್ಕೆ ಇದೆ ಎಂದು ನನಗೆ ಯಾರು ತಿಳಿಸಿದರು ಎಂದರೆ ಜಮೀನಿನ ರೈತರು ಅಂದರೆ ಶ್ರೀನಿವಾಸ ಎನ್ನುವವರು ತಿಳಿಸಿದ್ದರು. ನಾನು ಖರೀದಿ ಮಾಡುವ ಮುಂಚೆ ದಾವಾ ಸ್ವತ್ತಿನ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿದ್ದುಂಟೇ? ಎಂದರೆ ಮಾಡಿದ್ದೇನೆ. ದಾವಾ ಸ್ವತ್ತಿನ ಸರ್ವೆ ನಂ.102/1 ಇದ್ದು, ಅದರ ವಿಸ್ತೀರ್ಣ 1 ಎಕರ 32.4 ಗುಂಟೆಯನ್ನು ನಮಗೆ ರಿಜಿಸ್ಟರ್ ಮಾಡಿಕೊಟ್ಟಿದ್ದಾರೆ. ಸರ್ವೆ ನಂ.102 ರ ಒಟ್ಟು ವಿಸ್ತೀರ್ಣ 5 ಎಕರೆ 4 ಗುಂಟೆ ಇರುತ್ತದೆ. ದಾವಾ ಬಿ ಷೆಡ್ಯೂಲ್ ಆಸ್ತಿಯ ವಿಸ್ತೀರ್ಣ ಸರ್ವೆ ನಂ.102/2 ರಲ್ಲಿ ಹಳೆ ಪೋಡಿ ಪ್ರಕಾರ 1 ಎಕರೆ ಇದ್ದು, ಈಗ 21.4 ಗುಂಟೆ ತೋರಿಸುತ್ತಿದೆ. ಮೂಲತಃ ದಾವಾ ಸ್ವತ್ತು ಯಾರಿಗೆ ಸೇರಿತ್ತು ಎಂದರೆ ಸರ್ವೆ ನಂ.102 ರಲ್ಲಿ 5 ಎಕರೆ 4 ಗುಂಟೆಯನ್ನು ಹೆಚ್.ಎಸ್.ಶಾಮರಾವ್ ಎನ್ನುವವರು ಹರಾಜಿನಲ್ಲಿ ಖರೀದಿ ಮಾಡಿದ್ದರು. ಸದರಿಯವರಿಂದ 1950 ರಲ್ಲಿ ರಾಣೋಜೀರಾವ್ ಬಿನ್ ವಿಸೋಜೀರಾವ್ ಎನ್ನುವವರು 2 ಎಕರೆಯನ್ನು ಖರೀದಿ ಮಾಡಿದ್ದು, ಸದರಿಯವರಿಂದ ದಿನಾಂಕಃ 15.02.1965 ರಲ್ಲಿ 2 ಎಕರೆಯನ್ನು ಮೈನರ್ ನಾಗೋಜಿರಾವ್ ಬಿನ್ ಮುನಿಯೋಜಿರಾವ್ ರವರ ಪರವಾಗಿ ಅವರ ತಂದೆ ಮುನಿಯೋಜಿರಾವ್ ಖರೀದಿ ಮಾಡಿದ್ದರು. ನನ್ನ ಪ್ರಕಾರ ನನಗೆ ಮಾರಾಟ ಮಾಡಿದ ನಾಗೋಜಿರಾವ್‌ರವರು ಯಾವಾಗ ಪ್ರಾಪ್ತ ವಯಸ್ಕರಾದರು ಎಂದರೆ ನನಗೆ ಸದರಿಯವರು ಕ್ರಯಪತ್ರ ಬರೆದುಕೊಟ್ಟಾಗ ಅವರಿಗೆ ಅಂದಾಜು 60 ವರ್ಷ ವಯಸ್ಸಾಗಿತ್ತು. ದಿನಾಂಕಃ 15.02.1965 ರ ಕ್ರಯಪತ್ರದಲ್ಲಿ 2 ಎಕರೆಯ ಖರೀದಿದಾರ ನಾಗೋಜಿರಾವ್

4 ವರ್ಷದ ಮೈನರ್ ಬಾಲಕನೆಂದು ನಮೂದಾಗಿದೆ ಎಂದರೆ ಸರಿ. ಆದ್ದರಿಂದ, ನಾಗೋಜಿರಾವ್ ರವರ ತಂದೆ ಮುನಿಯೋಜಿರಾವ್‌ರವರೇ 2 ಎಕರೆಯ ಕಿಮ್ಮತ್ತನ್ನು ಪಾವತಿ ಮಾಡಿ ತನ್ನ ಮೈನರ್ ಮಗನ ಹೆಸರಿಗೆ ಕ್ರಯಪತ್ರ ನೋಂದಣೆ ಮಾಡಿಸಿದ್ದರು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ದಿನಾಂಕಃ 04.12.1965 ರಂದು ಮುನಿಯೋಜಿರಾವ್‌ರವರು ಪ್ರತಿವಾದಿಗಳ ತಂದೆಗೆ ಸದರಿ 2 ಎಕರೆಯ ಕ್ರಯಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ನಾಗೋಜಿರಾವ್‌ಗೆ ಕ್ರಯಪತ್ರ ನೋಂದಣೆಯಾದ 1965 ರಲ್ಲಿ 4 ವರ್ಷ ವಯಸ್ಸು ಇದ್ದರೇ ಅವರಿಗೆ 1972 ರಲ್ಲಿ ವಯಸ್ಸು 11 ವರ್ಷ ಇರುತ್ತದೆ ಎಂದರೆ ಸರಿ. ಆದ್ದರಿಂದ, ನಾಗೋಜಿರಾವ್‌ರವರು ಪ್ರಾಪ್ತ ವಯಸ್ಸಿಗೆ ಬಂದ 3 ವರ್ಷಗಳ ಒಳಗಡೆ ತನ್ನ ತಂದೆ ಬರೆದುಕೊಟ್ಟ ದಿನಾಂಕಃ 04.12.1965 ರ ಕಯಪತ್ರ ಊರ್ಜಿತವಲ್ಲವೆಂದು ಪರಿಹಾರ ಕೋರಿ ಯಾವುದೇ ದಾವೆಯನ್ನು ಸಲ್ಲಿಸಿಲ್ಲ ಎಂದರೆ ನನಗೆ ಅದರ ಬಗ್ಗೆ ಕೂಡ ಗೊತ್ತಿಲ್ಲ. 1965 ನೇ ಇಸವಿಯಿಂದ ಈ ದಿನಾಂಕದವರೆಗೂ ಪ್ರತಿವಾದಿಗಳೇ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಾಗೋಜಿರಾವ್‌ರವರು ದಾವಾ ಸ್ವತ್ತಿನ ಮೇಲೆ 2014 ನೇ ಇಸವಿಯಲ್ಲಿ ಮೊದಲ ಬಾರಿ ತನ್ನ ಹಕ್ಕನ್ನು ಪ್ರತಿಪಾದನೆ ಮಾಡಲು ಪ್ರಯತ್ನಿಸಿದರು ಎಂದರೆ ಇಲ್ಲ, 2019 ರಲ್ಲಿ ಎ.ಸಿ. ಯವರಿಂದ ನಾಗೋಜಿರಾವ್ ತನ್ನ ಹೆಸರಿಗೆ ಖಾತೆ ಬದಲಾವಣೆ ಆದೇಶವನ್ನು ಪಡೆದುಕೊಂಡಿದ್ದಾರೆ. ಆದ್ದರಿಂದ, ನಾಗೋಜಿರಾವ್ ಸುಮಾರು 39 ವರ್ಷಗಳ ನಂತರ ದಾವಾ ಸ್ವತ್ತುಗಳ ಮೇಲೆ ಹಕ್ಕು ಪ್ರತಿಪಾದನೆ ಮಾಡಲು ಬಂದಿದ್ದಾರೆ ಎಂದರೆ ಸರಿಯಲ್ಲ. ನಾಗೋಜಿರಾವ್‌ರವರು ಎ.ಸಿ. ಯವರ ಮುಂದೆ ಖಾತೆ ಬದಲಾವಣೆಗೆ ಸಲ್ಲಿಸಿದ ಅರ್ಜಿಯಲ್ಲಿ ಪ್ರತಿವಾದಿಗಳನ್ನು ಪಕ್ಷಕಾರರನ್ನಾಗಿ ಮಾಡಿರಲಿಲ್ಲ ಎಂದರೆ ಹೌದು, ಅವರು ಬಚ್ಚಪ್ಪ ಎನ್ನುವವರ ವಿರುದ್ಧ ಎ.ಸಿ. ಯವರ ಮುಂದೆ ಪ್ರಕರಣ ದಾಖಲಿಸಿದ್ದರು. ಪ್ರತಿವಾದಿಗಳು ಎ.ಸಿ. ಯವರ ಆದೇಶವನ್ನು ಪ್ರಶ್ನಿಸಿ ಎ.ಸಿ. ಯವರ ಮುಂದೆಯೇ ಪುನರೀಕ್ಷಣಾ ಅರ್ಜಿ (Revision Petition) ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಪ್ರಕರಣ ಈಗಲೂ ವಿಚಾರಣೆಯಲ್ಲಿದೆ ಎಂದರೆ ಅದು

ವಿಲೇವಾರಿ ಆಗಿ ನಾನು ಸದರಿ ಆದೇಶದ ವಿರುದ್ಧ ಜಿಲ್ಲಾಧಿಕಾರಿಗಳ ಮುಂದೆ ಅಪೀಲು ಸಲ್ಲಿಸಿ ತಡೆಯಾಜ್ಞೆ ಪಡೆದಿದ್ದೇನೆ. ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಸದರಿ ಅಪೀಲು ವಿಚಾರಣೆಯಲ್ಲಿದೆ ಎಂದರೆ ಸರಿ. ನಾಗೋಜಿರಾವ್ ರವರ ತಂದೆ ಪ್ರತಿವಾದಿಗಳ ತಂದೆಗೆ ದಿನಾಂಕಃ 04.12.1965 ರಂದೇ ಮಾರಾಟ ಮಾಡಿರುವ ಕಾರಣ ನಾಗೋಜಿರಾವ್ ರವರು ಪುನಃ ನನಗೆ ಮಾರಾಟ ಮಾಡಲು ಅವಕಾಶವಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ, ಸದರಿ ಕ್ರಯಪತ್ರದಡಿಯಲ್ಲಿ ನಾನು ಯಾವುದೇ ವಿಧವಾದ ಹಕ್ಕು, ಸ್ವಾಧೀನ ಮತ್ತು ಹಿತಾಸಕ್ತಿಯನ್ನು ಹೊಂದುವುದಿಲ್ಲ ಎಂದರೆ ಸರಿಯಲ್ಲ. ನನಗೆ ಪ್ರತಿವಾದಿಗಳ ತಂದೆಗೆ ಈಗಾಗಲೇ 1965 ರಲ್ಲೇ ಮಾರಾಟವಾಗಿರುವ ವಿಚಾರ ಗೊತ್ತಿದ್ದರೂ ಸಹ ದುಂಡಾವರ್ತಿಯಿಂದ ನನ್ನ ಹೆಸರಿಗೆ ಮತ್ತೆ ಕ್ರಯಪತ್ರ ಮಾಡಿಸಿಕೊಂಡಿದ್ದೇನೆ ಎಂರೆ ಸರಿಯಲ್ಲ.

4) ದಾವಾ 'ಬಿ' ಷೆಡ್ಯೂಲ್ ಸ್ವತ್ತು ಮೂಲತಃ ಹನುಮಂತರಾವ್ ರವರಿಗೆ ಸೇರಿತ್ತು ಎಂದರೆ ಸರಿ. ಸದರಿಯವರು ದಿನಾಂಕಃ 27.06.1950 ರಂದು 'ಬಿ' ಷೆಡ್ಯೂಲ್ ಸ್ವತ್ತನ್ನು ಕ್ರಯಪತ್ರದ ಮೂಲಕ ಖರೀದಿಸಿದ್ದಾರೆ ಎಂದರೆ ಸರಿ. ಆ ಕ್ರಯಪತ್ರದಡಿಯಲ್ಲಿ ಅವರು ಸರ್ವೆ ನಂ.102 ರಲ್ಲಿ 1 ಎಕರೆಯನ್ನು ಖರೀದಿ ಮಾಡಿದ್ದರು ಎಂದರೆ ಸರಿ. ಅವರ ಮರಣಾನಂತರ ಅವರ ಮಕ್ಕಳಾದ ಮುನಿಯೋಜಿರಾವ್ ಮತ್ತು ಶಾಮರಾವ್ ಸದರಿ 1 ಎಕರೆಯನ್ನು ಅನುಭೋಗ ಮಾಡುತ್ತಾ ಬಂದಿದ್ದರು ಎಂದರೆ ಸರಿ. ಅವರಿಬ್ಬರೂ ತಲಾ 20 ಗುಂಟೆಗೆ ಹಕ್ಕುದಾರರಾಗಿದ್ದಾರೆ ಎಂದರೆ ಸರಿ. ಶಾಮರಾವ್ ತನ್ನ 20 ಗುಂಟೆಯನ್ನು ದಿನಾಂಕಃ 16.08.1974 ರಂದು ತನ್ನ ಅಣ್ಣ ಮುನಿಯೋಜಿರಾವ್‌ಗೆ ಕ್ರಯಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಅದನ್ನು ಖರೀದಿ ಮಾಡುವ ಮುಂಚೆಯೇ ಮುನಿಯೋಜಿರಾವ್ ತನ್ನ 20 ಗುಂಟೆಯನ್ನು ದಿನಾಂಕಃ 17.09.1972 ರಂದು 5 ನೇ ಪ್ರತಿವಾದಿ ಮುಕುಂದರಾವ್ ರವರಿಗೆ ಕ್ರಯಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ತನ್ನ ತಮ್ಮ ಶಾಮರಾವ್ ಕಡೆಯಿಂದ ಖರೀದಿ ಮಾಡಿದ

20 ಗುಂಟೆಯನ್ನು ಸಹ ಮುನಿಯೋಜಿರಾವ್ ದಿನಾಂಕಃ 02.11.1974 ರಂದು 5 ನೇ ಪ್ರತಿವಾದಿಗೆ ಕ್ರಯಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆದ್ದರಿಂದ, 'ಬಿ' ಷೆಡ್ಯೂಲ್ ಸ್ವತ್ತಿನ ಸಂಪೂರ್ಣ ಮಾಲೀಕತ್ವವನ್ನು 5 ನೇ ಪ್ರತಿವಾದಿಯೇ ಹೊಂದಿದ್ದಾರೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯೇ 'ಬಿ' ಷೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾನು ರಾಜಾರಾವ್ ರವರು ಹನುಮಂತರಾವ್ ರವರ ಮೊಮ್ಮಗನೆಂದು ಹೇಳುತ್ತಿದ್ದು, ಅದರ ರುಜುವಾತಿಗೆ ದಾಖಲೆಗಳನ್ನು ಹಾಜರು ಮಾಡಿದ್ದೀನಾ? ಎಂದರೆ ಮಾಡಿದ್ದೇನೆ. ನಾನು ಅವರ ವಂಶವೃಕ್ಷವನ್ನು ಹಾಜರು ಮಾಡಿದ್ದೇನೆ. ನಾನು ಸದರಿಯವರ ಕುಟುಂಬದ ಯಾವುದೇ ವಂಶವೃಕ್ಷವನ್ನು ಹಾಜರು ಮಾಡದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ನನಗೆ ಅದನ್ನು ಕೊಟ್ಟಿದ್ದಿನೋ? ಇಲ್ಲವೋ? ಸರಿಯಾಗಿ ನೆನಪಿಲ್ಲ. ಮುಂದೆ ಹಾಜರು ಮಾಡುತ್ತೇನೆ. ಹನುಮಂತರಾವ್ ರವರ ಮಕ್ಕಳು 1972 ಮತ್ತು 1974 ರಲ್ಲೇ ಪೂರಾ 1 ಎಕರೆಯನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಕಾರಣ ಹನುಮಂತರಾವ್ ರವರ ಮೊಮ್ಮಕ್ಕಳಿಗೆ ದಾವಾ 'ಬಿ' ಷೆಡ್ಯೂಲ್ ಆಸ್ತಿಯ ಮೇಲೆ ಯಾವುದೇ ಹಕ್ಕು ಉಳಿದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಖರೀದಿ ಮಾಡುವ ಮುಂಚೆ ಯಾವುದೇ ದಾಖಲೆಗಳನ್ನು ಪರಿಶೀಲನೆ ಮಾಡದೇ ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾ 'ಎ' ಮತ್ತು 'ಬಿ' ಆಸ್ತಿಗಳನ್ನು ಮಾರಾಟ ಮಾಡಿದ ನಾಗೋಜಿರಾವ್ ಮತ್ತು ರಾಜಾರಾವ್ ಇವರುಗಳಿಗೆ ಅವುಗಳ ಮೇಲೆ ಯಾವುದೇ ವಿಧವಾದ ಹಕ್ಕು, ಸ್ವಾಧೀನ ಮತ್ತು ಹಿತಾಸಕ್ತಿ ಉಳಿದಿರಲಿಲ್ಲ ಎಂದರೆ ಸರಿಯಲ್ಲ. ನಾಗೋಜಿರಾವ್ ಮೈನರ್ ಇರುವಾಗಲೇ ಅವರ ತಂದೆ 'ಎ' ಸ್ವತ್ತನ್ನು ಖರೀದಿಸಿ ಅದೇ ವರ್ಷವೇ ಅದನ್ನು ಮಾರಾಟ ಮಾಡಿದ್ದ ವಿಚಾರ ಎಲ್ಲರಿಗೂ ಗೊತ್ತಿದ್ದರೂ ಸಹ ನಾನು ಅದರ ಕ್ರಯಪತ್ರ ಮಾಡಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ದಾವಾ 'ಎ' ಮತ್ತು 'ಬಿ' ಸ್ವತ್ತುಗಳ ಕ್ರಯಪತ್ರಗಳು ಕ್ರಮವಾಗಿ 56 ಮತ್ತು 47 ವರ್ಷಗಳ ಹಿಂದೆಯೇ ಆಗಿರುತ್ತವೆ ಎಂದರೆ ಸರಿ.

**(**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಿತು**).**

**(**ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**